International Journal of Kannada Research 2015; 1(3): 01-05




International Journal of Kannada Research
www.kannadajournal.com

**ISSN: 2454–5813**
IJSR 2015; 1(3): 01-05
© 2015 IJKS
www.kannadajournal.com
Received: 01-10-2015
Accepted: 02-11-2015

**Dr. Vamadev HT**
Asst. Professor, Department of Kannada, Karnataka Arts Degree College, Karnataka University, Dharawar-580003.

**Correspondence**
**Dr. Vamadev HT**
Asst. Professor, Department of Kannada, Karnataka Arts Degree College, Karnataka University, Dharawar-580003.

# ಶಿವರಾಮಕಾರಂತರ ಕಾದಂಬರಿಗಳಲ್ಲಿ ಪ್ರಕೃತಿ ಮತ್ತು ಉಳಿಗಮಾನ್ಯ ಪದ್ಧತಿ

**Dr. Vamadev HT**

ಡಾ. ಶಿವರಾಮ ಕಾರಂತರು ತಮ್ಮ ಕಾಲದ ತಮ್ಮ ಪ್ರದೇಶದ ಸುತ್ತ–ಮುತ್ತ ನಡೆದ ನೈಜ ಘಟನೆಗಳನ್ನು ಶೋಶಿತರ ಶೋಶಣೆಗಳನ್ನು ಮನಮುಟ್ಟುವಂತೆ ಚೋಮನದುಡಿ ಕಾದಂಬರಿಯಲ್ಲಿ ಜೀವನ ಚೋಮನನ್ನು ಚಿತ್ರಿಸಿದ್ದಾರೆ. ಕಾದಂಬರಿಯುದ್ಧ ಎಲ್ಲಿಯೂ ಸಹ ಬಂಡಾಯದ ಧ್ವನಿ ಕೇಳದೆ ಊಳಿಗಮಾನ್ಯ ಪದ್ಧತಿ ಮತ್ತು ಮಂತಾರವನ್ನು ಚೋಮದುಡಿಯಲ್ಲಿ ಮನ ಕಲಕುವಂತೆ ಚಿತ್ರಿಸಿದ್ದಾರೆ. ಸಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಬೆಳಕನ್ನು ಕಾಣದೆ ಅಮಾಯಕ ಸ್ಥಿತಿಯನ್ನು ಕಾದಂಬರಿ ಉದ್ದಕ್ಕೂ ನೀರುಪಿಸಿದ್ದಾರೆ.

ಮಾನವ ವಿರೊಧಿ ನೀತಿಗಳು ಮತ್ತು ಅಮಾನವೀಯ ಆಚರಣೆಗಳಾದ ಕೊಡಗಿನಲ್ಲಿ ನಡೆಯುವ ಹಜಲುಪದ್ಧತಿ ದೇವರ ಹೆಸರಿನಲ್ಲಿ ನಡೆಯುವ ದೇವದಾಸಿಪದ್ಧತಿ, ಅರಬೆತ್ತಲೆಯಂತಹ ಅಮಾನವೀಯ ಸೇವೆಗಳು ಎಂಜಲು ಬಾಳೆ ಎಲೆಯ ಮೇಲೆ ಉರುಳವ ಉರುಳುಸೇವೆ ಮುಂತಾದ ಅಮಾನವೀಯ ಪದ್ಧತಿ ನಮ್ಮ ಸಮಾಜದಲ್ಲಿ ಆಚರಣೆಯ ರೂಪದಲ್ಲಿ ಮೂಢನಂಬಿಕೆಯಾಗಿ ಉಳಿದುಕೊಂಡು ಇನ್ನೂ ಕೆಲವು ಕಡೆ ಜೀವಂತವಾಗಿರುವ ಈ ಅಮಾನವೀಯ ಆಚರಣೆಗಳ ಬಗ್ಗೆ ಜನಜಾಗೃತಿ ಮತ್ತು ಶಿಕ್ಷಣ ಕೆಳಮಟ್ಟ ವ್ಯಕ್ತಿಗೂ ಸಿಕ್ಕಾಗ ಅರಿವು ಸಾಧ್ಯ.

ಮಾನವೀಯ ಮನಸ್ಸು ಹೆಚ್ಚಾಗಬೇಕಾಗಿದೆ. ಅಂತರಾಂಗದ ಪ್ರೀತಿ ಸಹಾನುಭೂತಿ ಹೃದಯದಾಳದ ಮಾತುಗಳು ಶೋಷಿತರಿಗೆ ಪ್ರೇರಣೆಯಾಗುತ್ತವೆ. ಈ ನಿಟ್ಟಿನಲ್ಲಿ ಸಮಾಜದ ವ್ಯಕ್ತಿಗಳು ಸಹೃದಯರು, ಸಾಹಿತ್ಯಗಳು ಎಲ್ಲರೂ ತಮ್ಮ ತಮ್ಮ ಮಿತಿಯಲ್ಲಿ ಜಾಗೃತಿ ಮೂಡಿಸಿದಲ್ಲಿ ಶೋಷಿತರ ಬದುಕು ಹಸನಾಗುತ್ತದೆ. ಚೋಮನದುಡಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆ ಶೋಷಣೆ ಮತ್ತು ಅಮಾನವೀಯ ಕೃತ್ಯವೆಂದು ಕಾದಂಬರಿ ಉದ್ದಕ್ಕೂ ನಿರೂಪಿಸುತ್ತದೆ. ಬಡವರು ಗೇಣಿಗಾಗಿ ದುಡಿದು ದುಡಿದು ಧನಿಕರ ಮನೆಯಲ್ಲಿಯೇ ಮುಪ್ಪಾಗಿ ಸಾಯುತ್ತಾರೆ. ಇಂತಹ ಚೋಮನಂತಹ ಅನೇಕ ಬಡಕುಟುಂಬ ನಮ್ಮ ಸಮಾಜದಲ್ಲಿವೆ. ಉಳ್ಳವರ ಧೋರಣೆ ಬದಲಾಗಿ ಬಡವರಿಗೂ ಅನ್ನಸಿಗುವಂತಾಗಬೇಕು. ಇನ್ನು ಜಾತಿ ಧರ್ಮದ ಹೆಸರನಲ್ಲಿ ನಡೆಯುವ ಕುಟುಂಬ ಅನ್ಯಧರ್ಮದ ಮೊರೆ ಹೋಗಲಾರದೆ ತನ್ನ ಧರ್ಮದಲ್ಲಿದ್ದು, ಅನ್ನ, ಭೂಮಿ ಕಾಣದೆ ವಿಚಲಿತರಾಗಿ ಒದ್ದಾಡುತ್ತಿರುವದನ್ನು ಚೋಮನಕುಟುಂಬವನ್ನು ಅನ್ಯಧರ್ಮಕ್ಕೆ ಸೆಳೆಯುವ ಮತಾಂತರ ಪ್ರಸಂಗವು ಕೂಡಾ ಕಾರಂತರು ಮನಮುಟ್ಟುವಂತೆ ಚೋಮನ ಹೃದಸಂಕಟವನ್ನು ಕಾದಂಬರಿಯುದ್ದಕ್ಕೂ ನಿರೂಪಿಸಿದ್ದಾರೆ. "ಈ ಚೋಮನಿಗೂ ಒಂದು ಹಾಳು ಕೊಂಪೆಯನ್ನು ಗೇಣಿಗೆ ಕೊಟ್ಟಿದ್ದರೆ ನಿಮ್ಮ ಹೆಸರು ಹೇಳಿ ಬದುಕುತ್ತಿದ್ದ" ಎನ್ನುವ ಮಾತನ್ನು ಧಣಿಗಳ ಮುಂದಿಡುತ್ತಾನೆ. ಆದರೆ ಸಂಕಪ್ಪಯ್ಯ ಧಣಿಗಳು ಒಂದು ಕ್ಷಣ ಆಶ್ಚರ್ಯದಿಂದ ಹೊಲಯ ಬೇಸಾಯಿಗಾರನಾಗುವದುಂಟೆ ಪರಂಪರೆಯಲ್ಲಿ ನಮ್ಮ ಹಿರಿಯರು ಯಾರು ಗೇಣಿಗೆ ಕೊಟ್ಟಿಲ್ಲ ಎಂದು ಹೇಳುವುದರ ಮುಖಾಂತರ ನುಣಿಚಿಕೊಳ್ಳುತ್ತಾನೆ. ಚೋಮನ ಉಳುಮೆಯ ಕನಸು ಪಾದ್ರಿಯೂ ಕ್ರಶ್ಚನ್ ಧರ್ಮಕ್ಕೆ ಮತಾಂತರಗೊಳುವುದಾದರೆ ಎರಡು ಎಕರೆ ಜಮೀನನ್ನು ನೀಡುವುದಾಗಿ ತಿಳಿಸಿದಾಗ ಚೋಮನಿಗೆ ಧರ್ಮ ನೆನಪಾಗಿ ಅವನ ದೈವ ಪಂಜುರ್ಲಿ ದೇವರ ಬಯದಿಂದ ಕನಸು ಈಡೇರುವದಿಲ್ಲ. ಕಾರಂತರು ಈ ರೀತಿ ಅಮಾನವೀಯ ನಂಬಿಕೆಯಿಂದ ಶೋಷಿತರು ಹೊರಬರಬೇಕಾಗಿದೆ ಎನ್ನುವುದನ್ನು ಕಾದಂಬರಿಯುದ್ದಕ್ಕೂ ನಿರೂಪಿಸುತ್ತಾರೆ. ಶಿವರಾಮ ಕಾರಂತರು ಪ್ರಕೃತಿಯನ್ನು ಕುರಿತು ಬೆಟ್ಟದ ಜೀವ, ಮರಳಿಮಲ್ಲಿಗೆ, ಚೋಮದುಡಿಯಲ್ಲಿ, ಪ್ರಕೃತಿಯ ಬಗ್ಗೆ ಇರುವ ಪ್ರೀತಿಯನ್ನು ಪರಿಸರವನ್ನು ಜಾಗತೀಕರಣದ ಸಂದರ್ಭದಲ್ಲಿ ನಮ್ಮ ಯುವ ಪೀಳಿಗೆ ಯಾವ ರೀತಿ ಉಳಿಸಿಕೊಂಡು ಪರಿಸರ ಸ್ನೇಹಿಯಾಗಬೇಕೆಂಬುದನ್ನು ಕಾದಂಬರಿಯುದ್ದಕ್ಕು ನಿರೂಪಿಸುತ್ತಾರೆ.

ಶಿವರಾಮಕಾರಂತರ 'ಚೋಮನದುಡಿ' ಕಾದಂಬರಿಯು ಶೋಷಿತ ಸಮುದಾಯದ ಬದುಕಿನ ವಿವಿದ ನೆಲೆಗಳನ್ನು ಪರಿಚಯಿಸುತ್ತದೆ.

ಈ ಕಾದಂಬರಿಯಲ್ಲಿ ಮುಖ್ಯ ಪಾತ್ರ 'ಚೋಮ' ಎಂಬುವವನು. ಈತ ಈ ಕಾದಂಬರಿಯಲ್ಲಿ ಹಿಂದುಳಿದ ಜನಾಂಗದವನು ಅಂದರೆ ಕೆಳಜಾತಿಯವನು. ಕಾರಂತರು ಚೋಮನ ಮೂಲಕ ಹಿಂದಿನ ಕಾಲದಲ್ಲಿ ಕೆಳಜಾತಿಯವರಿಗೆ ಯಾವ ರೀತಿ ಕಷ್ಟಗಳಿದ್ದವು. ಅದನ್ನ ಕೆಳಜಾತಿಯವರು ಹೇಗೆ ಸಹಿಸಿಕೊಳ್ಳುತ್ತಿದ್ದರು ಮತ್ತು ತಮ್ಮ ಜೀವನವನ್ನ ಹೇಗೆ ನಡೆಸುತ್ತಿದ್ದರು. ಸ್ವಾಭಿಮಾನಿಗಳಾಗಿದ್ದರು ತಮ್ಮ ಆಸೆಗಳನ್ನು ತಮ್ಮ ಮನಸ್ಸಲ್ಲೆ ಇಟ್ಟುಕೊಂಡು ತಮ್ಮ ಕಷ್ಟಕರ ಜೀವನವನ್ನು ಸಾಗಿಸುತ್ತಿದ್ದರು ಎಂಬುದನ್ನ ಕಾರಂತರ ಈ ಕಾದಂಬರಿಯಲ್ಲಿ ಚೋಮನ ಪಾತ್ರದ ಮೂಲಕ ತಿಳಿಸಿದ್ದಾರೆ. ಕಾರಂತರು ಈ ಕಾದಂಬರಿಯನ್ನು ಒಂದು ಜಾತ್ರೆಯ ಚಿತ್ರಣದ ಮೂಲಕ ಪ್ರಾರಂಭವಾಗಿ ಜೊತೆಗೆ ದಲಿತ ಸಂಸ್ಕೃತಿಯ ಕಲೆಯ ಔನತ್ಯದೊಂದಿಗೆ ಕಾದಂಬರಿ ತೆರೆದುಕೊಳ್ಳುತ್ತದೆ. ಅದು ಒಂದು ಕಾಡು ಪ್ರದೇಶ ಜಾತ್ರೆ ಮುಗಿದ ಸಾಯಂಕಾಲದ ಸಮಯದಲ್ಲಿ ಜನರು ಆ ಕಾಡಿನಲ್ಲಿ ಬರುತ್ತಿರುವಾಗ ಎಲ್ಲೊ ದುಡಿಯನ್ನು ಭಾರಿಸುತಿರುವ ಶಬ್ದ ಕೇಳಿ ಬರುತ್ತದೆ. ದುಡಿ ಎಂದರೆ ಒಂದು ಚರ್ಮವಾದ್ಯ. ಈ ಚರ್ಮವಾದ್ಯವನ್ನು ಹೆಚ್ಚಾಗಿ ಕೆಳಜಾತಿಯವರು ಬಾರಿಸುತ್ತಿದ್ದರು. ಇದರ ಮೂಲಕ ಚೋಮ ಕೆಳಜಾತಿಯವನು ಎಂಬುದು ತಿಳಿಯುತ್ತದೆ. ಆದರೆ ಈಗ ಎಲ್ಲಾ ಜಾತಿಯವರು ಚರ್ಮವಾದ್ಯವನ್ನು ಬಾರಿಸುತ್ತಾರೆ. ಆದರೆ ಹಿಂದಿನ ಕಾಲದಲ್ಲಿ ಅದು ಕೆಳಜಾತಿಯವರಿಗೆ ಮೀಸಲಾಗಿತ್ತು. ಇದರಿಂದಲೂ ಸಹ ಅವರು ಕೆಳಜಾತಿಯವರು ಎಂದು ಗುರುತಿಸುತ್ತಿದ್ದರು. ಇದನ್ನು ಕಾರಂತರು ಇಲ್ಲಿ ತೋರಿಸಿದ್ದಾರೆ. ದುಡಿಯ ಶಬ್ದ ಕೇಳಿದ ತಕ್ಷಣ ಜನರು ಇದು ಚೋಮ ಎಂದು ಗುರುತಿಸುತ್ತಿದ್ದರು. ಚೋಮ ತನಗೆ ಹೆಚ್ಚು ದುಃಖವಾದಾಗ ಮತ್ತು ಹೆಚ್ಚು ಸಂತೊಷವಾದಾಗ ಈ ದುಡಿಯನ್ನು ಬಾರಿಸುತ್ತಿದ್ದನು. ಚೋಮ ಕಡು ಬಡವನಾಗಿದ್ದನು. ಇವನದು ಒಂದು ಸಣ್ಣಗುಡಿಸಲು ಅದು ಮಳೆ ಬಂದರೆ ಸೋರುತ್ತಿತ್ತು. ಇದರಿಂದ ಚೋಮನ ಬಡತನ ಎಷ್ಟಿತ್ತು ಎಂದು ತಿಳಿಯಬಹುದು. ಚೋಮನ ಸಂಸಾರ ಎಂದರೆ ಆತನ ರೋಗಿಷ್ಟ ಹೆಂಡತಿ ಮತ್ತು ಚೋಮನ ನಾಲ್ಕು ಜನ ಮಕ್ಕಳಾದ ಬೆಳ್ಳಿ, ಕಾಳ, ಚನಿಯ, ಗುರುವ ಇದು ಇವನ ಸಂಸಾರ. ಚೋಮ ಆ ಊರಿನ ಒಬ್ಬ ಗೌಡರ ಮನೆಯಲ್ಲಿ ದುಡಿಯುತ್ತಿದ್ದನು. ಅವನ ದುಡಿತಕ್ಕೆ ಗೌಡರು ಸ್ವಲ್ಪ ಅಕ್ಕಿಯನ್ನು ನೀಡುತ್ತಿದ್ದರು. ಇದರಿಂದ ಆ ದಿನದ ಊಟದ ಕೆಲಸ ಮುಗಿಯುತ್ತಿತ್ತು. ಆದರೆ ಕೆಲವೊಮ್ಮೆ ಚೋಮ ಆ ಅಕ್ಕಿಯನ್ನ ಯಂಡದ ಅಂಗಡಿಗೆ ನೀಡಿ ಯಂಡ ಕುಡಿದು ಬಿಡುತ್ತಿದ್ದ. ಆ ದಿನ ಎಲ್ಲರೂ ಉಪವಾಸವಿರಬೇಕಾಗುತ್ತಿತ್ತು. ಇಲ್ಲವಾದರೆ ಚೋಮನ ಮಗಳು ಗೌಡರ ಮನೆಯಲ್ಲಿ ಸಾಲವಾಗಿ ಅಕ್ಕಿಯನ್ನು ತರುತ್ತಿದ್ದಳು. ಅದಕ್ಕೆ ಬದಲಾಗಿ ಬೆಳಿಗ್ಗೆ ಬೇಗ ಎದ್ದು ಗೌಡರ ಮನೆಗೆ ಎರಡು ಹೊರೆ ಸೊಪ್ಪನ್ನು ತಂದು ಹಾಕುತ್ತಿದ್ದಳು. ಇಲ್ಲಿ ಕಾರಂತರು ಚೋಮನ ಬಡತನದ ಜೀವನ ಯಾವ ರೀತಿ ಇತ್ತು ಎಂಬುದನ್ನು ತೋರಿಸಿದ್ದಾರೆ. ಚೋಮನ ಹೆಂಡತಿ ಸದಾ ರೋಗದಿಂದ ಬಳಲುತ್ತಿದ್ದಳು. ಚೋಮನಿಂದ ಅದನ್ನು ಸರಿಪಡಿಸಲು ಅಂದರೆ ಚಿಕಿತ್ಸೆ ಕೊಡಿಸಲು ಅವನ ಬಳಿ ಹಣವಿರಲಿಲ್ಲ ಮತ್ತು ಅದು ಮೂಢನಂಬಿಕೆಯ ಕಾಲವಾಗಿತ್ತು.

ಚೋಮನ ಮತ್ತೊಂದು ಕಸುಬೆಂದರೆ ಬಿದಿರಿನ ಬುಟ್ಟಿ ಎಣೆಯುವುದು ಇದು ಅವನ ಕಾಯಕವನ್ನು ತಿಳಿಸುತ್ತದೆ. ಇದು ಕಾಡಿನ ಪ್ರದೇಶದಲ್ಲಿ ಸಾಮಾನ್ಯವಾಗಿ ಕಾಣುತ್ತಿದ್ದ ಒಂದು ಕಸುಬು ಎಂಬುದನ್ನು ಕಾರಂತರು ಈ ಮೂಲಕ ತಿಳಿಸಿದ್ದಾರೆ. ಇದಕ್ಕೆ ಬೇಕಾಗುತ್ತಿದ್ದ ಬಿದಿರನ್ನು ಬುಟ್ಟಿ ಎಣೆದು ಅದನ್ನು ಮಾರಿ ಬಂದ ಹಣದಿಂದ ಸ್ವಲ್ಪ ಹಣವನ್ನು ಯಂಡದ ಅಂಗಡಿಗೆ ನೀಡುತ್ತಿದ್ದನು. ಸ್ವಲ್ಪ ಹಣದಿಂದ ಮನೆಗೆ ಬೇಕಾದ ಉಪ್ಪುಕಾರವನ್ನು ತರುತ್ತಿದ್ದನು. ಸ್ವಲ್ಪ ದಿನಗಳ ನಂತರ ಹೆಂಡತಿ ಸತ್ತು ಹೋದಳು. ಆಗ ಮನೆಯ ಸಂಸಾರದ ಹೊಣೆ ಚೋಮನ ಮಗಳ ಮೇಲೆ ಬೀಳುತ್ತದೆ. ಚೋಮನ ಬಳಿ ಎರಡು ಎತ್ತುಗಳಿದ್ದವು. ಚೋಮನ ಜೀವನದ ಮಹದಾಸೆ ಏನೆಂದರೆ ಒಂದು ಸ್ವಂತ ಜಮೀನನ್ನು ತೆಗೆದುಕೊಂಡು ತನ್ನ ಎತ್ತುಗಳಿಂದ ಅದನ್ನು ಉತ್ತು ಅದರಿಂದ ಬರುವ ಫಸಲನ್ನು ತಾನೇ ಪೂರ್ತಿ ಪಡೆಯಬೇಕು ಎಂಬುದು ಚೋಮನ ಆಸೆ. ಒಮ್ಮೆ ಈ ಆಸೆಯನ್ನು ಚೋಮ ಗೌಡರಿಗೆ ತಿಳಿಸಿದಾಗ ಗೌಡರು ಚೋಮನನ್ನು ಬೈದು, ಹಿಯ್ಯಾಳಿಸುತ್ತಾರೆ. ನಂತರ ಗೌಡರು ಆ ಎತ್ತುಗಳನ್ನು ತಂದು ನನ್ನ ಹತ್ತಿರ ಬಿಡು ಹತ್ತು ರೂಪಾಯಿ ಕೊಡುತ್ತೇನೆ ಎಂದು ಹೇಳುತ್ತಾನೆ. ಆದರೆ ಚೋಮ ತನ್ನ ಛಲವನ್ನು ಬಿಡುವುದಿಲ್ಲ. ಒಮ್ಮೆ ಚೋಮನ ಮನೆಗೆ ಅವನ ಸಂಬಂಧಿಕರು ಬರುತ್ತಾರೆ. ಆಗ ಚೋಮನಿಗೆ ತುಂಬ ಸಂತೋಷವಾಗುತ್ತದೆ. ಆದರೆ ನೀಲಳಿಗೆ ತುಂಬ ಹೆದರಿಕೆಯಾಗುತ್ತದೆ. ಏಕೆಂದರೆ ಅವರು ಇದ್ದಷ್ಟು ದಿನ ಅವರಿಗೆ ಪ್ರತಿನಿತ್ಯ ಊಟದ ವ್ಯವಸ್ಥೆ ಮಾಡಬೇಕು ಎಂಬುದು. ಆದರೆ ಚೋಮ ಇದನ್ನು ಗಮನಿಸುವುದಿಲ್ಲ. ತನ್ನ ಜೊತೆಗೆ ಕುಡಿಯುವವರು ಅವರಲ್ಲ ಎಂಬ ಸಂತೋಷ ಆತನಿಗೆ. ಇದು ಹಿಂದಿನ ಕಾಲದಲ್ಲಿ ಹಿಂದುಳಿದವರ ಸಾಮಾನ್ಯ ಬುದ್ಧಿಯಾಗಿತ್ತು ಏಕೆಂದರೆ ಬೇರೆಯವರಿಗೆ ದುಡಿದು ಅವರು ಕೊಟ್ಟಷ್ಟು ಪಡೆದು ಜೀವನ ನಡೆಸುವುದು ಕಷ್ಟವಾಗುತ್ತಿತ್ತು. ಅವರು ಅಂದ ಮಾತನ್ನು ಕೇಳಿಕೊಂಡು ನೋವನ್ನು ಸಹಿಸಿಕೊಳ್ಳಬೇಕಾಗುತ್ತಿತ್ತು. ಈ ನೋವನ್ನು ಮರೆಯಲು ಯಂಡವನ್ನು ಕುಡಿಯುವುದು ಸಾಮಾನ್ಯವಾಗಿತ್ತು ಎಂಬುದನ್ನು ಕಾರಂತರು ಇಲ್ಲಿ ತೋರಿಸಿದ್ದಾರೆ. ಈಗೆ ಸಂಬಂಧಿಕರು ಬಂದ ಮೇಲೆ ಚೋಮನ ಮಗಳು ಗೌಡರ ಮನೆಯಲ್ಲಿ ಹೆಚ್ಚಿಗೆ ಕೆಲಸ ಮಾಡಿ ಅಲ್ಲಿ ಸ್ವಲ್ಪ ಸ್ವಲ್ಪ ಅಕ್ಕಿಯನ್ನು ಉಳಿಸುತ್ತಿದ್ದಳು. ಅದನ್ನು ತಂದು ಹೇಗೋ ನಿರ್ವಹಿಸುತ್ತಿದ್ದಳು.

ಒಮ್ಮೆ ಬೇರೊಬ್ಬ ಗೌಡರು ಅವರ ಮನೆಯಲ್ಲಿ ಸತ್ತಿದ್ದ ಎಮ್ಮೆಯನ್ನು ಚೋಮನಿಗೆ ತೆಗೆದುಕೊಳ್ಳುವಂತೆ ಹೇಳಿದರು. ಇದರಿಂದ ಚೋಮನಿಗೆ ತುಂಬಾ ಸಂತೋಷವಾಯಿತು. ಅದನ್ನು ತಂದು ಅದರ ಚರ್ಮ ಸುಲಿದು ಅದರ ಮಾಂಸವನ್ನು ಕತ್ತರಿಸಿ ಅದನ್ನು ಸಿದ್ಧ ಮಾಡುವಂತೆ ಮಗಳಿಗೆ ಹೇಳಿದನು. ಆದರೆ ಅದಕ್ಕೆ ಹಾಕಲು ಉಪ್ಪುಕಾರ ಏನು ಇರಲಿಲ್ಲ. ಅಗ ಅವಳು ಗೌಡರ ಮನೆಗೆ ಹೋಗಿ ಅದನ್ನ ಬೇಡಿ ತಂದಳು. ಒಳ್ಳೆಯ ಅಡುಗೆ ಸಿದ್ಧವಾಯಿತು ಆದರೆ ಅದರ ಜೊತೆಗೆ ಯಂಡದ ವ್ಯವಸ್ಥೆ ಮಾಡಲು ಚೋಮ ಮತ್ತು ನಂಟರು ಸೇರಿ ಬಿದಿರಿನ ಬುಟ್ಟಿಗಳನ್ನು ಎಣೆದು ಅದನ್ನು ಯಂಡದ ಅಂಗಡಿಯವನಿಗೆ ನೀಡಿ ಯಂಡ ತಂದರು. ಅಂದು ಅವರಿಗೆ ಬಹಳ ಸಂತೋಷವಾಯಿತು. ಅಂದು ಚೋಮ ದುಡಿಯನ್ನು ಬಾರಿಸುತ್ತ ಕುಣಿದು ಸಂತೋಷಪಟ್ಟನು. ಚೋಮ ಹೆಚ್ಚು ಸಂತೋಷವಾದಾಗ ಕುಣಿದು ಕುಪ್ಪಳಿಸುತಲಿದ್ದ ಆದರೆ ಕೋಪ ಬಂದಾಗ ಬಡವನ ಕೋಪ ದವಡೆಗೆ ಮೂಲ ಎಂಬಂತೆ ತನ್ನ ಕೋಪ ಮಕ್ಕಳಿಗೆ ಚೆನ್ನಾಗಿ ಹೊಡೆದು ಅವರನ್ನ ಕಾಲಿಂದ ತುಳಿದು ತನ್ನ ಕೋಪವನ್ನು ಅಲ್ಲಿ ತೀರಿಸಿಕೊಳ್ಳುತ್ತಿದ್ದ. ಇದು ಹಿಂದುಳಿದವರಲ್ಲಿ ಸಾಮಾನ್ಯವಾಗಿತ್ತು. ಏಕೆಂದರೆ ಮೇಲ್ಜಾತಿಯವರು ಶೋಷಣೆ ಮಾಡಿದಾಗ ಅದನ್ನು ಪ್ರತಿಭಟಿಸಲು ಸಾಧ್ಯವಾಗದೆ ಈ ರೀತಿ ತಮ್ಮ ಸಿಟ್ಟನ್ನು ಕಡಿಮೆ ಮಾಡಿಕೊಳ್ಳುತ್ತಿದ್ದರು. ಇದನ್ನೆ ಕಾರಂತರು ಇಲ್ಲಿ ಚಿತ್ರಿಸಿದ್ದಾರೆ. ಮರುದಿನ ಚೋಮ ಎಮ್ಮೆಯ ಚರ್ಮವನ್ನು ಮಾರಲು ಹೋದಾಗ ಚರ್ಮ ತೆಗೆದುಕೊಳ್ಳುವವನು ಚೋಮನ ಬಳಿ ಇದ್ದ ಎತ್ತುಗಳನ್ನು ಮೂವತ್ತು ರೂಪಾಯಿಗೆ ಕೇಳುತ್ತಾನೆ. ಅಗಲು ಸಹ ಚೋಮ ತನ್ನ ಮನದಾಸೆಯನ್ನು ಮನದಲ್ಲೆ ಇಟ್ಟುಕೊಂಡು ಎತ್ತನ್ನು ನೀಡಲು ನಿರಾಕರಿಸುತ್ತಾನೆ. ಈಗ ಚೋಮ ಎಷ್ಟೇ ಕಷ್ಟ ಬಂದರೂ ಎತ್ತನ್ನು ನೀಡದೆ ಇಟ್ಟುಕೊಂಡಿರುತ್ತಾನೆ. ಒಮ್ಮೆ ಚೋಮನಿಗೆ ಗೌಡರು ನಿನ್ನಎತ್ತುಗಳನ್ನು ತಂದು ನಮ್ಮ ಹೊಲವನ್ನು ಉಳು ಎಂದಾಗ ವಿಧಿಯಿಲ್ಲದೆ ತನ್ನ ಆಸೆಯನ್ನ ಬದಿಗಿಟ್ಟು ಆ ಹೊಲವನ್ನು

ಉಳುತ್ತಾನೆ. ಆದರೆ ಅದರಿಂದ ಬಂದ ಫಸಲನ್ನು ಗೌಡರು ಇಟ್ಟುಕೊಂಡು ಸ್ವಲ್ಪ ಭಾಗವನ್ನು ಚೋಮನಿಗೆ ನೀಡುತ್ತಾರೆ. ಚೋಮ ದುಃಖವನ್ನು ಸಹಿಸಲಾಗದೆ ಎತ್ತುಗಳಿಗೆ ಚೆನ್ನಾಗಿ ಹೊಡೆದು ಅವುಗಳ ಕಾಲು ಗಾಯವಾಗುವಂತೆ ಹೊಡೆಯುತ್ತಾನೆ. ಇದು ಸಹ ಹಿಂದುಳಿದವರ ಮೇಲಿನ ದೌರ್ಜನ್ಯವಾಗಿದೆ ಎಂದು ಕಾರಂತರು ಇಲ್ಲಿ ತಿಳಿಸಿದ್ದಾರೆ. ಒಂದು ದಿನ ಬೆಳಗ್ಗೆ ಚೋಮನಿಗೆ ದೇಹಕ್ಕೆ ಸರಿಇರುವುದಿಲ್ಲ ಮಲಗಿರುತ್ತಾನೆ, ಕಾರ್ಕಳದ ಕಾಫಿತೋಟದ ಸರದಾರ ಅಲ್ಲಿಗೆ ಬರುತ್ತಾನೆ. ಶೇರೆಗಾರ ಚೋಮ ಕೊಡಬೇಕಾಗಿದ್ದ ಸಾಲ ಕೇಳಲು ಬಂದಿರುತ್ತಾನೆ. ಅಸಲು, ಬಡ್ಡಿ ಸೇರಿ ಅದು 15 ರೂಪಾಯಿ ಆಗಿರುತ್ತದೆ. ಅಷ್ಟು ಹಣ ಅವನ ಹತ್ತಿರ ಇರಲಿಲ್ಲ. ತನ್ನ ಎತ್ತುಗಳನ್ನು ಮಾರಿ ಅದರಿಂದ ಸಾಲ ತೀರಿಸಲು ಸಾಧ್ಯವಿಲ್ಲ. ಆಗ ಕೆಲಸಕ್ಕೆ ತನ್ನ ಮಕ್ಕಳನ್ನು ಕಳುಹಿಸುತ್ತಾನೆ. ಈ ಪದ್ಧತಿ ಹಿಂದಿನ ಕಾಲದಲ್ಲಿ ಹಿಂದುಳಿದವರಿಗೆ ಅಂದರೆ ಕೆಳಜಾತಿಯವರಿಗೆ ಸಾಮಾನ್ಯವಾಗಿತ್ತು.

ಕೆಳಜಾತಿಗಳನ್ನು ಪುರೋಹಿತಶಾಹಿ ಕಾಲದಲ್ಲಿ ಹೇಗೆ ದುಡಿಸಿ ಅವರನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿತ್ತು ಎಂಬುದನ್ನು ತಿಳಿಸುತ್ತದೆ. ಹೇಗೆಂದರೆ ತಂದೆ ಮಾಡಿದ ಸಾಲಕ್ಕೆ ಮಕ್ಕಳ ಕಾಲಕ್ಕೂ ಜೀತದಾಳುಗಳಿಗೆ ವಂಶಪಾರಂಪರ್ಯವಾಗಿ ಅದನ್ನು ಮಾಡಬೇಕಾಗಿತ್ತು. ಇದು ಒಂದು ದೌರ್ಜನ್ಯವಾಗಿತ್ತು. ನಂತರ ಚೋಮನ ಮಕ್ಕಳಾದ ಚನಿಯ ಮತ್ತು ಗುರುವ ಅಲ್ಲಿಗೆ ಹೋಗುತ್ತಾರೆ. ಇಲ್ಲಿಂದ ಅದು ಬಹಳ ದೂರವಾಗಿತ್ತು. ಇಬ್ಬರು ಕಾಫಿ ತೋಟಕ್ಕೆ ಹೋಗುತ್ತಿದ್ದ ಬೇರೆ ಊರಿನವರ ಜೊತೆಗೆ ಅಲ್ಲಿಗೆ ಬಂದರೆ ಕಾಫಿ ತೋಟಕ್ಕೆ ಕಾಲಿನ ನಡಿಗೆಯಲ್ಲೇ ಹೋಗುತ್ತಾರೆ. ವಾಹನ ವ್ಯವಸ್ಥೆ ಇಲ್ಲದ ಕಾಲವಾಗಿತ್ತು ಮತ್ತು ವಾಹನದಲ್ಲಿ ಹೋಗಲು ಇವರ ಬಳಿ ಅಷ್ಟು ಹಣವಿರಲಿಲ್ಲ. ಇವರು ಕಾಫಿ ತೋಟಕ್ಕೆ ಹೋಗಲು ಮೂರು ನಾಲ್ಕು ದಿನವಾದರು ಬೇಕಾಗಿತ್ತು. ರಾತ್ರಿಯಾಗುವವರೆಗೆ ನಡೆದು ರಾತ್ರಿಯಾದಾಗ ಅಲ್ಲಿ ಮಲಗುತ್ತಿದ್ದರು. ಈಗೆ ದಾರಿ ಮಧ್ಯದಲ್ಲಿ ಒಂದು ಕುಟುಂಬದಲ್ಲಿ ಒಂದು ಹುಡುಗಿ ಸತ್ತು ಹೋಗುತ್ತಾಳೆ. ಅವಳಿಗೆ ಜ್ವರ ಬಂದು ಸಾಯುತ್ತಾಳೆ. ಇಂತಹ ಹಲವಾರು ಕಷ್ಟಗಳನ್ನ ಆ ಕಾಲದಲ್ಲಿ ಕೆಳಜಾತಿಯವರು ಅನುಭವಿಸಬೇಕಾಗಿತ್ತು. ಹೀಗೆ ಕಾಫಿ ತೋಟವನ್ನು ತಲುಪಿದರು. ಅಲ್ಲಿ ತಾವು ಇದ್ದ ಗುಡಿಸಿಲಿನ ಪಕ್ಕದ ಗುಡಿಸಿಲಿನಲ್ಲಿ ಕಾರ್ಕಳದ ಕ್ರಿಶ್ಚಿಯನ್ನರು ಇದ್ದರು. ಅವರಿಗೆ ಒಬ್ಬ ಮಗಳು ಸಹ ಇದ್ದಳು. ಗುರುವ ಅವಳನ್ನ ನೋಡಿ ಅವರಿಬ್ಬರು ಪ್ರೀತಿಸಿದರು. ಈಗೆ ಪ್ರತಿ ದಿನ ಕಾಫಿ ತೋಟದಲ್ಲಿ ಎಷ್ಟು ದುಡಿದರು ಅವರ ಸಾಲ ತೀರುತ್ತಿರಲಿಲ್ಲ. ಇದು ಇವರ ಮನಸ್ಸಿಗೆ ತುಂಬಾ ನೋವನ್ನುಂಟು ಮಾಡುತ್ತಿತ್ತು. ಆದರೆ ಒಂದು ದಿನ ಗುರುವ ಮೇರಿಯ ಜೊತೆ ಹೋಡಿ ಹೋದನು. ಇಲ್ಲಿ ಜಾತ್ರೆಯ ಸಂದರ್ಭ ಮಕ್ಕಳು ಇಲ್ಲದಿರುವುದನ್ನು ನೆನೆದು ಚೋಮ ದುಃಖಿಸುತ್ತಿದ್ದನು. ಆದರೆ ಆ ಸಮಯಕ್ಕೆ ಮಕ್ಕಳು ಚನಿಯ ಅಲ್ಲಿಂದ ಬಂದುಬಿಡುತ್ತಾನೆ. ನಡೆದ ಘಟನೆಯನ್ನು ಹೇಳಿದನು ಇದರಿಂದ ಇನ್ನೂ ದುಃಖವಾಯಿತು. ಒಂದು ದಿನ ಚನಿಯ ಊರಿನ ಕೆರೆಯಲ್ಲಿ ಮುಳುಗಿ ಸಾಯುತ್ತಿದ್ದಂತಹ ಸಂದರ್ಭದಲ್ಲಿ ಒಬ್ಬ ಮೇಲ್ಜಾತಿಯ ಹುಡುಗ ಅವನನ್ನ ಮೇಲೆತ್ತಲು ಹೋದಾಗ ಅವರು ಜಾತಿಯವರು ಅವನನ್ನು ತಡೆದು ಅವನು ಕೀಳು ಜನ ಅವನನ್ನ ಮುಟ್ಟಬಾರದು ಎಂದು ತಡೆಯುತ್ತಾರೆ. ಆದರೆ ಚನಿಯ ನೀರಿನಲ್ಲಿ ಮುಳುಗಿ ಸಾಯುತ್ತಾನೆ. ನಂತದ ಅದೇ ಹುಡುಗ ಅವನನ್ನ ಮೇಲಕ್ಕೆ ಎತ್ತುತ್ತಾನೆ. ಈ ಸಂದರ್ಭದ ಮೂಲಕ ತಿಳಿಯಬಹುದು ಹಿಂದಿನ ಕಾಲದಲ್ಲಿ ಜಾತಿ ಬೇಧ ಯಾವ ಮಟ್ಟದಲ್ಲಿ ಇತ್ತು. ಕೆಳಜಾತಿಯವರು ಯಾವ ರೀತಿ ನೋವನ್ನು ಅನುಭವಿಸುತ್ತಿದ್ದರು ಎಂಬುದನ್ನು ಕಾರಂತರು ಓದುಗರ ಹೃದಯ ಕಲಕುವಂತೆ ಇಲ್ಲಿ ಚಿತ್ರಿಸಿದ್ದಾರೆ. ಇಂತಹ ಹಲವಾರು ಶೋಷಣೆಗಳನ್ನು ಕೆಳಜಾತಿಯವರು ಮೇಲ್ಜಾತಿಯವರು ನೀಡುತ್ತಿದ್ದ ಕಿರುಕುಳವನ್ನು ತಾಳಲಾರದೆ ಆತ್ಮಹತ್ಯೆಯನ್ನು ಸಹ ಮಾಡಿಕೊಂಡಂತಹ ಸಂದರ್ಭ ಕಂಡುಬರುತ್ತದೆ. ಈ ಕೆಳವರ್ಗದ ಜನರ ಸಂಕಷ್ಟಗಳನ್ನು ತಮ್ಮದೇ ಆದ ನೆಲೆಯಲ್ಲಿ ಪ್ರತಿಪಾದಿಸುವುದರ ಮೂಲಕ ಅವರ ಸಂಸ್ಕೃತಿಯ ವಿವಿಧ ಕ್ರಮಗಳನ್ನು ಸಮಾಜಕ್ಕೆ ಪರಿಚಯಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಹೀಗೆ ಚೋಮನ ಮನೆಯಲ್ಲಿ ದುಃಖದ ಮಡುವು ತುಂಬಿತ್ತು ಒಂದು ಕಡೆ ಒಬ್ಬ ತಮ್ಮನ್ನು ಬಿಟ್ಟು ಬೇರೆ ಧರ್ಮದವರ ಜೊತೆಗೆ ಹೋದದ್ದು ಒಂದು ಕಡೆಯಾದರೆ ಮಗ ಸತ್ತದ್ದು ಒಂದು ಕಡೆ. ಈಗೆ ಇವರ ಜೀವನ ಮುಂದುವರೆಯುತ್ತಿತ್ತು. ಈ ವರ್ಷದ ಜಾತ್ರೆಯು ಸಹ ಹತ್ತಿರ ಬರುತ್ತಿತ್ತು. ಜಾತ್ರೆಯ ದಿನ ಎಲ್ಲರೂ ಜಾತ್ರೆಗೆ ಹೋಗುತ್ತಾರೆ. ಈ ಸಂದರ್ಭದಲ್ಲಿ ಚೋಮ ದುಡಿಯನ್ನು ಭಾರಿಸುತ್ತಿದ್ದಾಗ ಒಬ್ಬ ಹುಡುಗ ಅದರ ತಾಳಕ್ಕೆ ಸರಿಯಾಗಿ ಕುಣಿಯುತ್ತಿದ್ದ. ಅದನು ಕಂಡು ಚೋಮ ಒಂದು ಕ್ಷಣ ಈತ ನನ್ನ ಅಳಿಯನಾದರೆ ಎಷ್ಟು ಚೆಂದ ನನ್ನ ತಾಳಕ್ಕೆ ಸರಿಯಾಗಿ ಕುಣಿಯುತ್ತಾನೆ ಎಂದು ಯೋಚಿಸುತ್ತಾನೆ. ಆದರೆ ಮರುಕ್ಷಣ ಯೋಚಿಸುತ್ತಾನೆ. ಅವಳು ನನ್ನ ಮನೆಗೆ ಗಂಡು ಮಗನ ಹಾಗೆ ಅವಳನ್ನು ಕಳೆದುಕೊಂದರೆ ನನ್ನ ಮನೆಯನ್ನು ನಡೆಸಲು ಸಾಧ್ಯವಿಲ್ಲ ಎಂದು ಸುಮ್ಮನಾಗುತ್ತಾನೆ. ಇದರಲ್ಲಿ ಅವನ ಸ್ವಾರ್ಥವನ್ನು ನಾವು ಕಾಣಬಹುದು.

ನಂತರ ಜಾತ್ರೆ ಮುಗಿದ ಮೇಲೆ ಒಂದು ದಿನ ಚೋಮನ ಆಸೆಯಂತೆ ಗುರುವ ಕ್ರಿಶ್ಚಿಯನ್ನರ ಮನೆಯಲ್ಲಿ ಸ್ವಂತ ಜಮೀನಿನಲ್ಲಿ ದುಡಿಯುತ್ತಿದನು. ಅದೇ ರೀತಿ ಅವರ ಊರಲ್ಲಿ ಸಹ ಅಂದರೇ ಬೆಳ್ತಂಗಡಿಯಲ್ಲೂ ಸಹ ಇದ್ದ ಕ್ರಿಶ್ಚಿಯನ್ನರು ಹಿಂದುಳಿದವರಿಗೆ ಸ್ವಂತ ಜಮೀನನ್ನು ನೀಡುತ್ತಿದ್ದರು. ಆಸೆ ಪಟ್ಟ ಚೋಮ ಕ್ರಿಸ್ಚಿಯನ್ನರನ್ನು ಕೇಳಲು ಹೋಗುತ್ತಾನೆ. ಇಲ್ಲಿ ಕಾರಂತರು ಚೋಮನಿಗೆ ಅಷ್ಟು ವಯಸ್ಸಾದರು ಅವನ ಆಸೆಗೆ ವಯಸ್ಸಾಗಲಿಲ್ಲ ಎಂಬುದು ಮತ್ತು ಹಿಂದಿನ ಕಾಲದಲ್ಲಿ ಹಿಂದುಳಿದ ಜನರು ಗೌಡರ ಮನೆಯಲ್ಲಿ ದುಡಿದು ಅವನೆಲ್ಲ ಅವರಿಗೆ ನೀಡಿ ಅವರ ಮನೆಯಲ್ಲಿ ವರ್ಷಗಟ್ಟಲೆಯಿಂದ ಇದ್ದರು. ತಮ್ಮ ಆಸೆಯನ್ನ ಬದಿಗಿಟ್ಟು, ವಯಸ್ಸಾದರು ಅದನ್ನ ಮನಸ್ಸಿನಲ್ಲೇ ಇಟ್ಟು ದುಡಿಯುತ್ತಿದ್ದರು. ಅವರಿಗೆ ವಯಸ್ಸಾದರು ಆ ಆಸೆಗೆ ವಯಸ್ಸಾಗುತ್ತಿರಲಿಲ್ಲ. ಅದೇ ರೀತಿ ಚೋಮನಿಗೂ ಸಹ. ಹೀಗೆ ಚೋಮ ಕ್ರಿಶ್ಚಿಯನ್ನರನ್ನು ಕೇಳಿದಾಗ ಅವರು ನೀಡುವುದಾಗಿ ಹೇಳಿದರು ಇದು ಚೋಮನಿಗೆ ಊಟವಿಲ್ಲದವರಿಗೆ ಊಟ ಕೊಟ್ಟ ಹಾಗೆ ಆಯಿತು. ಆದರೆ ಊಟ ಕೊಟ್ಟು ಅದನ್ನು ಕಾಲಿನಿಂದ ಒದ್ದಂತೆ ಆ ಕ್ರಿಶ್ಚಿಯನ್ ಧರ್ಮದವರು ಆದರೆ ಚೋಮ ನೀನು ನಮ್ಮ ಧರ್ಮಕ್ಕೆ ಸೇರಬೇಕು ಎಂದನು. ಆ ಸಂದರ್ಭದಲ್ಲಿ ಚೋಮ ಏನು ಮಾತನಾಡದೆ ವಾಪಸ್ಸು ಬರುತ್ತನೆ. ಆ ರಾತ್ರಿ ಅವನ ಕನಸಿನಲ್ಲಿ ಅವರ ಎರಡು ದೇವತೆಗಳು ಬಂದು ಅವನಿಗೆ ಹೇಳುತ್ತವೆ. ಆಗ ಚೋಮ ಹೆದರಿಕೊಂಡು ಆ ಆಸೆಯನ್ನು ಬಿಡುತ್ತಾನೆ. ಆದರೆ ಸ್ವಂತ ಜಮೀನನ್ನು ತನ್ನ ಎತ್ತುಗಳಿಂದ ಊಳುವ ಆಸೆ ಬಿಡುವುದಿಲ್ಲ.

ಚೋಮ ತನ್ನ ಆಸೆಯನ್ನು ಮನಸ್ಸಲ್ಲೆ ಇಟ್ಟುಕೊಂಡು ತನ್ನ ಜೀವನವನ್ನ ಸಾಗಿಸುತ್ತಿದ್ದಾನೆ. ಆದರೆ ಮತ್ತೆ ಒಂದು ದಿನ ಕಾರ್ಕಳದ ಕಾಫಿತೋಟದ ಸರದಾರ ಮತ್ತೆ ಚೋಮನ ಮನೆಗೆ ಬರುತ್ತಾನೆ. ಚನಿಯ, ಗುರುವ ಕಾಫಿ ತೋಟಕ್ಕೆ ಹೋದವರು ಅವರ ಸಾಲವನ್ನು ಪೂರ್ತಿಯಾಗಿ ತೀರಿಸದೆ ವಾಪಸ್ಸು ಬಂದಿರುತ್ತಾರೆ. ಆ ಸಾಲ ಹಾಗೆ ಮುಂದುವರೆದಿರುತ್ತದೆ. ಅದನ್ನ ಪಡೆಯಲು ಮತ್ತೆ ಶೇರದಾರ ಬಂದಿರುತ್ತಾನೆ. ಆದರೆ ಈಗ ಅಲ್ಲಿಗೆ ಕಳುಹಿಸಲು ಗಂಡು ಮಕ್ಕಳು ದೊಡ್ಡವರು ಯಾರು ಇಲ್ಲ ಗಂಡಸರು ಎಂದರೇ ಚೋಮನನ್ನು ಬಿಟ್ಟರೆ ಚಿಕ್ಕ ಹುಡುಗ ಕಾಳ ಮಾತ್ರ ಇವರಿಬ್ಬರನ್ನು ಬಿಟ್ಟರೆ ಚೋಮನ

ಮಗಳು ಬೆಳ್ಳಿ ಮಾತ್ರ. ಆದರೆ ಇವನಿಗೆ ತೀರಿಸಲು ಇವನ ಬಳಿ ಹಣವಿಲ್ಲ. ಎತ್ತುಗಳನ್ನು ಮಾರಲು ಸಾಧ್ಯವಿಲ್ಲ ಅಂದರೆ ಮನಸ್ಸಿಲ್ಲ. ತಾನು ಹೋಗಲು ಸಾಧ್ಯವಿಲ್ಲ ಅಂದರೆ ವಯಸ್ಸಾಗಿತ್ತು. ಈ ಸಂದರ್ಭದಲ್ಲಿ ಶೇರಗಾರನ ಕಣ್ಣು ಬೆಳ್ಳಿಯ ಮೇಲೆ ಬೀಳುತ್ತದೆ. ಇಲ್ಲಿ ಕಾರಂತರು ಹೇಗೆ ಆ ಕಾಲದಲ್ಲಿ ಮೇಲ್ಜಾತಿಯವರು ಕೆಳಜಾತಿಯವರ ಹೆಣ್ಣು ಮಕ್ಕಳನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರು ಎಂಬುದನ್ನ ಇಲ್ಲಿ ಚಿತ್ರಿಸಿದ್ದಾರೆ.

ಈ ಸಂದರ್ಭದಲ್ಲಿ ಚೋಮ ಏನು ಮಾಡಲು ಸಾಧ್ಯವಾಗದೆ ತನ್ನ ಮಗಳನ್ನೆ ಕಾರ್ಕಳದ ಕಾಫಿ ತೋಟಕ್ಕೆ ಕಳುಹಿಸುವ ಸಂದರ್ಭ ಬರುತ್ತದೆ. ವಿಧಿ ಇಲ್ಲದೆ ಚೋಮ ತನ್ನ ಮಗಳನ್ನ ಮತ್ತು ಕೊನೆಯ ಮಗ ಕಾಳನನ್ನ ಕಳುಹಿಸಲು ನಿರ್ಧರಿಸುತ್ತಾನೆ. ಕಾರ್ಕಳಕ್ಕೆ ಹೋಗಲು ಮೊದಲೇ ತಿಳಿಸಿದಂತೆ ಬಹಳ ದೂರ ವಾಹನದ ಸಂಚಾರ ಸರಿಯಾಗಿ ಇಲ್ಲದ ಕಾಲ. ಈ ಸಮಯದಲ್ಲಿ ಬೆಳ್ಳಿ ಮತ್ತು ಕಾಳನನ್ನು ತನ್ನ ಮೋಟಾರಿನಲ್ಲಿ ಕರೆದುಕೊಂಡು ಹೋಗುವ ಯೋಜನೆಯನ್ನು ಮಾಡುತ್ತಾನೆ. ಆದರೆ ಇದು ಕರುಣೆಯಿಂದಲೋ ಅಥವಾ ಸಹಾಯ ಮಾಡುವ ದೃಷ್ಟಿಯಿಂದಲೋ ಅಲ್ಲ. ಅವಳ ಮೇಲಿನ ಕೆಟ್ಟ ಆಸೆಯಿಂದ ಮೇಲು ಜಾತಿಯವರು ಹೆಸರಿಗೆ ಮಾತ್ರ, ಮೇಲೆ ನೋಡಲು ಮಾತ್ರ ಮೇಲು ಆದರೆ ಅವರ ಮನಸ್ಸು ಕೀಳು ಎಂಬುದನ್ನ ಇಲ್ಲಿ ತಿಳಿಸಿದ್ದಾರೆ. ಆದರೆ ಮೇಲು ಜಾತಿಯವರು ಎಲ್ಲರು ಕೆಟ್ಟವರಿರಲಿಲ್ಲ. ಹೀಗೆ ಬೆಳ್ಳಿಯನ್ನು ಶೇರಗಾರ ವಾಹನದ ವ್ಯವಸ್ಥೆ ಇರುವ ತನಕ ತನ್ನ ಗಾಡಿಯಲ್ಲೆ ಕರೆದುಕೊಂಡು ಹೋಗಿ ಅಲ್ಲಿಂದ ವಾಹನದಲ್ಲಿ ಕಳುಹಿಸುತ್ತಾನೆ. ನಂತರ ಆ ವಾಹನದ ವ್ಯವಸ್ಥೆ ಮುಗಿದ ಮೇಲೆ ತನ್ನ ಮೋಟಾರಿನಲ್ಲಿ ಕಾಫಿತೋಟಕ್ಕೆ ಕರೆದುಕೊಂಡು ಹೋಗುತ್ತಾನೆ. ಹೀಗೆ ಬೆಳ್ಳಿ ತನ್ನ ಅಪ್ಪ ಮಾಡಿದ ಸಾಲಕ್ಕೆ ತಾನು ದುಡಿದು ತೀರಿಸುವಂತಹ ಸಂದರ್ಭ ಬರುತ್ತದೆ.

ಕಾರ್ಕಳದ ಕಾಫಿತೋಟಕ್ಕೆ ಬಂದ ಮೇಲೆ ಎಲ್ಲರ ಜೊತೆ ಇವಳನ್ನು ಇರಿಸಲಾಯಿತು. ಒಂದು ದಿನ ಆ ತೋಟದ ಮಾಲೀಕ ಅವಳನ್ನ ಕಂಡು ಅವನು ಸಹ ಅವಳನ್ನ ಇಷ್ಟಪಡುತ್ತಾನೆ. ಶೇರಗಾರನಿಂದ ಇವಳು ಯಾರು ಎಂಬುದನ್ನು ತಿಳಿದುಕೊಳ್ಳುತ್ತಾನೆ. ತೋಟದ ಮಾಲಿಕ ನಿನ್ನ ಅಪ್ಪ ಮತ್ತು ತಮ್ಮಂದಿರ ಹಾಗೆ ಮಾಡಬೇಡ ಸರಿಯಾಗಿ ಕೆಲಸ ಮಾಡಿ ಸಾಲವನ್ನು ತೀರಿಸಿದ ಮೇಲೆ ಹೋಗಬೇಕು ಎಂದು ಹೇಳುತ್ತಾನೆ. ಆದರೆ ಅವನ ಕಣ್ಣು ಸಹ ಅವಳ ಮೇಲೆ ಇರುತ್ತದೆ. ಆದರೆ ಸ್ವಲ್ಪ ದಿನದವರೆಗೆ ಮಾತ್ರ ಅವಳು ಎಲ್ಲಾ ಜನರ ಜೊತೆ ಇದ್ದಳು. ಆದರೆ ಶೇರದಾರ ತನ್ನ ಆಸೆಗೋಸ್ಕರ ತನ್ನ ಹೆಂಡತಿ ಅವಳ ತವರೂರಿಗೆ ಹೋದಾಗ ಬೆಳ್ಳಿಯನ್ನ ತನ್ನ ಮನೆಗೆ ಕರೆದುಕೊಂಡು ಹೋಗುವ ಯೋಚನೆ ಮಾಡಿದನು. ಬೆಳ್ಳಿ ನೀನು ಬರಿ ತೋಟದಲ್ಲೆ ಕೆಲಸ ಮಾಡುತ್ತಿದ್ದರೆ ನಿನ್ನ ಸಾಲ ತೀರುವುದಿಲ್ಲ. ಅದಕ್ಕೆ ನೀನು ನನ್ನ ಮನೆಗೆ ಬಂದುಬಿಡು ನನ್ನ ಮನೆಯ ಕೆಲಸವನ್ನು ಮಾಡು ಅದಕ್ಕೂ ಸಹ ನಿನಗೆ ಸಂಬಳ ಕೊಡುತ್ತೇನೆ ಎಂದು ಹೇಳು ರಾತ್ರಿ ಮನೆಗೆ ಬರುತ್ತೇನೆ ಎಂದು ಹೇಳಿ ಹೋಗುತ್ತಾನೆ. ಇದರ ಅರ್ಥ ಬೆಳ್ಳಿಯನ್ನ ತನ್ನ ಆಸೆಗೆ ಬಲಿಪಶುಮಾಡಲು. ಇದನ್ನು ಕೇಳಿದ ತಕ್ಷಣ ಬೆಳ್ಳಿ ಭಯದಿಂದ ನಡುಗುತ್ತಾಳೆ, ಅಳುತ್ತಾಳೆ. ಆದರೆ ಬೇರೆ ವಿಧಿಯೇ ಇಲ್ಲ ತನ್ನನ್ನು ತಾನು ಅವನಿಗೆ ಒಪ್ಪಿಸುವಂತಹ ಸಂದರ್ಭ ಬಂದುಬಿಟ್ಟಿತು ಎಂದು ಅಳುತ್ತಾಳೆ. ಆ ರಾತ್ರಿ ಶೇರಗಾರ ಅವಳ ಮನೆಗೆ ಬಂದು ಅವಳನ್ನ ತನ್ನ ದುರಾಸೆಗೆ ಬಳಸಿಕೊಳ್ಳುತ್ತಾನೆ. ಇಲ್ಲಿ ಕಾರಂತರು ಶೇರದಾರ ಹೆಸರಿಗೆ ಮೇಲುಜಾತಿಯವನಾಗಿ ತನ್ನ ಮನಸ್ಸಿನಲ್ಲಿ ಎಂತಹ ಕೆಟ್ಟ ಆಲೋಚನೆ ಮಾಡಿರುವುದನ್ನು ಇಲ್ಲಿ ತೋರಿಸಿದ್ದಾರೆ.

ಬೆಳ್ಳಿ ಹೀಗೆ ಕೆಟ್ಟ ದಾರಿ ಹಿಡಿದ ಮೇಲೆ ಒಂದು ದಿನ ಶೇರಗಾರ ತನ್ನ ಮನೆಗೆ ಬೆಳ್ಳಿಯನ್ನು ಕರೆದುಕೊಂಡು ಹೋಗುತ್ತಾನೆ. ಇಂತಹ ಸಂದರ್ಭದಲ್ಲಿ ಬೆಳ್ಳಿ ತೋಟಕ್ಕೆ ಕೆಲಸಕ್ಕೆ ಹೋದಾಗ ಅಲ್ಲಿನ ಜನರು ಇವಳನ್ನು ಹೀಯಾಳಿಸುತ್ತಿದ್ದರು. ಬೆಳ್ಳಿ ಇದರಿಂದ ಬಹಳ ನೊಂದಿದ್ದಳು. ಆದರೆ ಅದನ್ನು ಸಹಿಸಿಕೊಳ್ಳುತ್ತಿದ್ದಳು. ಇದನ್ನು ದಿನ ಕೇಳಿ ಬೇರೆ ವಿಧಿ ಇಲ್ಲದೆ ತನ್ನ ತಪ್ಪಿನ ಬಗ್ಗೆ ಅವಳಿಗೆ ಅಸಹ್ಯವೆನಿಸಿತು. ಹೀಗೆ ದಿನ ಮುಂದುವರೆಯುತ್ತಿತ್ತು.

ಹೀಗೆ ಒಂದು ದಿನ ಕಾಳ ಒಂದು ಹುಡುಗನ ಜೊತೆ ಆಟವಾಡುತ್ತಿದ್ದಾಗ ಆ ಹುಡುಗನಿಗೂ ಕಾಳನಿಗೂ ಜಗಳವಾಗುತ್ತದೆ. ಆಗ ಆ ಹುಡುಗ ಕಾಳನಿಗೆ ಶೇರಗಾರರ ಭಾವನೆಂಟ ಎಂದು ಬೈಯುತ್ತಾನೆ. ಆದರೆ ಅದರ ಅರ್ಥ ಕಾಳನಿಗೆ ತಿಳಿದಿರುವುದಿಲ್ಲ. ಆದರೆ ಅದರಿಂದ ಮನನೊಂದ ಕಾಳ ಅಳುತ್ತಾ ಓಡಿ ಬಂದು ತನ್ನ ಅಕ್ಕನಿಗೆ ನಡೆದ ವೃತ್ತಾಂತವನ್ನೆಲ್ಲ ಹೇಳಿ ಅವನು ಬೈದ ಮಾತನ್ನ ಹೇಳಿದನು. ಇದನ್ನು ಕೇಳಿ ಬೆಳ್ಳಿಯ ಮನಸಿಗೆ ತಡೆಯಲಾರದ ನೋವುಂಟಾಯಿತು. ಇದರ ಅರ್ಥ ಬಹಳ ಆಳವಾಗಿಯೇ ಇತ್ತು. ಭಾವನೆಂಟ ಎಂದರೆ ಅಕ್ಕನಗಂಡ ಎಂದು ಈ ಮಾತು ಅವಳಿಗೆ ತಾನು ಮಾಡಿರುವ ತಪ್ಪು ಸಣ್ಣ ಮಗುವಿಗೂ ಸಹ ತಿಳಿದಿದೆ. ಇದು ಎಂತಾ ದೊಡ್ಡ ತಪ್ಪು ಎಂದು ಮನನೊಂದು ಅಲ್ಲಿಂದ ತನ್ನ ತಮ್ಮನನ್ನ ಕರೆದುಕೊಂಡು ತನ್ನ ಊರಿಗೆ ಬರುವ ಸಿದ್ಧತೆ ಮಾಡಿಕೊಳ್ಳುತ್ತಾಳೆ. ಶೇರಗಾರ ತನ್ನ ಮನೆಗೆ ಕರೆದುಕೊಂಡು ಹೋದಾಗ ತನ್ನ ಹೆಂಡತಿಯ ಒಡವೆ-ಬಟ್ಟೆಗಳನ್ನೆಲ್ಲ ಕೊಟ್ಟಿರುತ್ತಾನೆ. ಅದನ್ನು ಸಹ ತೆಗೆದುಕೊಂಡು ಅಲ್ಲಿಂದ ಹೊರಡುತ್ತಾಳೆ.

ಇತ್ತ ಬೆಳ್ತಂಗಡಿಯಲ್ಲಿ ಜಾತ್ರೆಯ ಸಮಯ ಚೋಮ ತನ್ನ ಮಗಳು ಇಲ್ಲದಿರುವುದನ್ನು ನೆನೆದು ಅಳುತ್ತಿರುತ್ತಾನೆ. ಅಂತಹ ಸಂದರ್ಭದಲ್ಲಿ ಬೆಳ್ಳಿ ಅಲ್ಲಿಗೆ ಅಂದರೆ ಬೆಳ್ತಂಗಡಿಗೆ ಬರುತ್ತಾಳೆ. ಮಗಳು ಬಂದದ್ದು ಚೋಮನಿಗೆ ತಡೆಯಲಾರದ ಸಂತೋಷವಾಯಿತು. ಸಾಲ ತೀರಿತು ಎಂಬ ಮಾತು ಕೇಳಿ ಇನ್ನೂ ಸಂತೋಷವಾಯಿತು. ಮಾರನೆಯ ದಿನ ಜಾತ್ರೆಯ ಸಿದ್ಧತೆ ಮಾಡಿಕೊಂಡು ಜಾತ್ರೆಗೆ ಹೋಗುತ್ತಾರೆ. ಆದರೆ ಕಾರ್ಕಳದಲ್ಲಿ ಶೇರಗಾರ ಬೆಳ್ಳಿ ಇಲ್ಲದಿರುವುದನ್ನು ಕಂಡು ಅವಳಿಗಾಗಿ ಹುಡುಕಾಟ ನಡೆಸುತ್ತಿದ್ದನು. ಆದರೆ ಇವರು ಇಲ್ಲಿ ಜಾತ್ರೆಯ ಸಂಭ್ರಮದಲ್ಲಿದ್ದರು. ಹುಡುಕಾಡುತ್ತಿದ್ದವರು ಕೆರೆಯಲ್ಲಿ ಯಾರದೋ ಒಂದು ಹೆಣ್ಣಿನ ಬಟ್ಟೆ ಮತ್ತು ಒಂದು ಹುಡುಗನ ಬಟ್ಟೆ ಸಿಕ್ಕಿದ್ದರಿಂದ ಅವರಿಬ್ಬರು ಸತ್ತುಹೋದರೆಂಬ ಭಾವನೆಯಿಂದ ಅವರನ್ನ ಹುಡುಕುವುದನ್ನು ಬಿಟ್ಟುಬಿಟ್ಟರು. ಇಲ್ಲಿ ಜಾತ್ರೆಯ ಸಂಭ್ರಮವು ಮುಗಿದಿತ್ತು. ಆದರೆ ಸ್ವಲ್ಪ ದಿನದ ನಂತರ ಶೇರದಾರ ತಿಳಿದುಕೊಳ್ಳುತ್ತಾನೆ. ಆದರೆ ಆ ವೇಳೆಗೆ ಚೋಮ ಸ್ವಂತ ಜಮೀನನ್ನು ಉಳುವ ಆಸೆಯ ನೆರವೇರದಿದ್ದಾಗ ಮನನೊಂದು ಆ ಎರಡು ಎತ್ತುಗಳನ್ನು ಕಾಡಿಗೆ ಬಿಟ್ಟು ಮನೆಗೆ ಬರುತ್ತಾರೆ. ಆದರೆ ಚೋಮ ಮನೆಯಲ್ಲಿ ಕಾಣಬಾರದ ದೃಶ್ಯವನ್ನು ಕಂಡು ತಡೆಯಲಾರದ ಆಘಾತ ಉಂಟಾಗುತ್ತದೆ.

ಚೋಮನ ಮನಸ್ಸಿಗೆ ಆಘಾತವಾಗುವಂತೆ ಕಂಡ ದೃಶ್ಯವೆಂದರೆ ಶೇರಗಾರ ಮತ್ತು ಬೆಳ್ಳಿ ಒಂದೇ ಚಾಪೆಯ ಮೇಲೆ ಅಕ್ಕ ಪಕ್ಕದಲ್ಲಿ ಕುಳಿತಿರುವುದು ಚೋಮನಿಗೆ ಮೊದಲೆ ತನ್ನ ದೊಡ್ಡ ಆಸೆ ನೆರವೇರದೆ ಬೇಸರಗೊಂಡು ಎತ್ತುಗಳನ್ನು ಕಾಡಿನಲ್ಲಿ ಬಿಟ್ಟು ದುಃಖದಿಂದ ಮನೆಗೆ ಬಂದಿದ್ದ. ಈ ಸಮಯದಲ್ಲಿ ಈ ದೃಶ್ಯ ಕೆಂಡಕ್ಕೆ ತುಪ್ಪ ಸುರಿದಂತಾಯಿತು. ಇದರಿಂದ ಕೋಪಗೊಂಡ ಚೋಮ ಶೇರದಾರನಿಗೆ ಬೈದು ಅಲ್ಲಿಂದ ಕಳುಹಿಸಿದ. ಬೆಳ್ಳಿಯನು ಇವನಿಗೆ ತುಂಬಾ ಕೋಪ ಬಂದಿತ್ತು. ಅದನ್ನು ಸಹಿಸಲಾರದೆ ತನ್ನ ಮನೆಯ ಭಾಗ್ಯವೆಂದು, ಗಂಡು ಮಗನೆಂದು ತಿಳಿದಿದ್ದ ಬೆಳ್ಳಿಯ ಈ ತಪ್ಪು ಕೆಲಸ ಮಾಡಿರುವುದು ನೋಡಿ ಅವನಿಗೆ ತಡೆಯಲಾರದ ದುಃಖವಾಯಿತು. ಬೆಳ್ಳಿಯನ್ನು ಹೊಡೆದು ಹೊರಗೆ ತಳ್ಳಿ ಬಾಗಿಲನ್ನು ಮುಚ್ಚಿಕೊಂಡು ದುಡಿಯನ್ನು ಭಾರಿಸುತ್ತ ತನ್ನ ನೋವನ್ನು ಅದರಲ್ಲಿ ದೂರ ಮಾಡಲು ಜೋರಾಗಿ ಬಡಿಯುತ್ತಿರುತ್ತಾನೆ. ಬೆಳ್ಳಿ ಮನೆಯ ಮುಂದಲಿನ ಮರದ ಕೆಳಗೆ

ಕುಳಿತಿರುತ್ತಾಳೆ. ಕಾಳನು ಸಹ ಅಲ್ಲಿಗೆ ಬರುತ್ತಾನೆ. ಬೆಳ್ಳಿ ಮತ್ತು ಕಾಳ ರಾತ್ರಿಯೆಲ್ಲ ಆ ಮರದ ಕೆಳಗೆ ಮಲಗಿರುತ್ತಾರೆ. ಚೋಮ ಕಾಡಿಗೆ ಬಿಟ್ಟ ಎತ್ತುಗಳು ಒಡೆಯನ ಕೃತಜ್ಞತೆಗೆ ಮನೆಯ ಮುಂದಿ ನಿಂತಿರುತ್ತವೆ. ಬೆಳಗ್ಗೆ ನೋಡಲು ಹೋದಾಗ ಚೋಮ ತನ್ನ ದುಡಿಯನ್ನು ಭಾರಿಸುತ್ತಾ ತನ್ನ ಪ್ರಾಣವನ್ನೇ ತ್ಯಾಗ ಮಾಡಿರುತ್ತಾನೆ.

ಹೀಗೆ ಶಿವರಾಮಕಾರಂತರು ತಮ್ಮ ಕಾಲದಲ್ಲಿ ತಮ್ಮ ಪ್ರದೇಶದ ಸುತ್ತಮುತ್ತ ನಡೆಯುತ್ತಿದ್ದ ಕೆಳಜಾತಿಯವರ ಶೋಷಣೆಯನ್ನ ಮನ ಮುಟ್ಟುವಂತೆ ಇಲ್ಲಿ ಚಿತ್ರಿಸಿದ್ದಾರೆ. ಆದರೆ ಇವರ ಕಾದಂಬರಿಯಲ್ಲಿ ಎಲ್ಲಿಯೂ ಬಂಡಾಯದ ಮಾತುಗಳು ಕೇಳಿ ಬರುದೇ ಇರುವುದು ಕೆಳಜಾತಿಗಳನ್ನು ಇನ್ನು ಸಾಮಾಜಿಕವಾಗಿ, ಶೈಕ್ಷಣಿಕ, ಆರ್ಥಿಕವಾಗಿ ಬೆಳಕನ್ನು ಕಾಣದೇ ಅಸಹಾಯ ಸ್ಥಿತಿಯನ್ನು ಪ್ರತಿಧ್ವನಿಸುತ್ತದೆ.

**ಗ್ರಂಥಋಣ**


1. ಶಿವರಾಮ ಕಾರಂತರು – ಚೋಮನದುಡಿ
2. ಶಿವರಾಮ ಕಾರಂತರು – ಮರಳಿ ಮಣ್ಣಿಗೆ
3. ಶಿವರಾಮ ಕಾರಂತರು – ಬೆಟ್ಟದ ಜೀವ
4. ಅನಂತ ಮೂರ್ತಿ – ಸಂಸ್ಕಾರ –ಅಕ್ಷರ ಪ್ರಕಾಶನ ಹೆಗ್ಗೋಡು
5. ಟಿ.ಪಿ ಅಶೋಕ – ಶಿವರಾಮ ಕಾರಂತರು ಪ್ರಸಾರಾಂಗ ಹಂಪಿ
6. ಇನಾಂದಾರ್ – ಶಿವರಾಮ ಕಾರಂತರ ಬದುಕು–ಬರಹ ಗೋವಿಂದ ಪೈ ಸ್ಮಾರಕ್ ಕೇಂದ್ರ ಹುಡುಪಿ–1978
7. ಕುವೆಂಪು ಕಾನೂರು ಹೆಗ್ಗಡತಿ – ಉದಯರವಿ ಪ್ರಕಾಶನ ಮೈಸೂರು–1992
8. ಕುವೆಂಪು ಮಲೆಗಳಲ್ಲಿ ಮದುಮಗಳು – ಉದಯರವಿ ಪ್ರಕಾಶನ ಮೈಸೂರು–1992
9. ಹಾ.ಮಾ. ನಾಯಕ – ಕಾದಂಬರಿ ಲೋಕ– ಗೀತಾ ಬುಕ್ ಹೌಸ್ ಮೈಸೂರು
10. ವಿವೇಕ ರೈ – ಕನ್ನಡ ಕಾದಂಬರಿ ಮೊದಲ ಹೆಜ್ಜೆಗಳು– ಮಂಗಳೂರು ವಿ.ವಿ. –1987